# ಶಂಖಪುಷ್ಪದ ಚೆಲುವು

ಚಿತ್ರ ಬರಹ:
**ಪ್ರೇಮಾ ಭಟ್**







**ಈ** ಚೆಲುವಾದ ಹೂವಿನ ಅನ್ವರ್ಥನಾಮ ಶಂಖಪುಷ್ಪ. ಫೆಬೇಸಿಯ ಕುಟುಂಬಕ್ಕೆ ಸೇರಿದ ಇದರ ಸಸ್ಯಶಾಸ್ತ್ರೀಯ ಹೆಸರು ಕ್ಲಿಟೋರಿಯ ಟರ್ನೇಟಿ. ಬಿಳಿ, ಕೆಂಪು, ಕಡು ನೀಲ, ನಸು ನೀಲ, ತಿಳಿ ನೇರಳೆ ಮುಂತಾದ ಬಣ್ಣಗಳಲ್ಲಿ ಕಾಣಸಿಗುವ ಇದರಲ್ಲಿ ಏಕ ಮತ್ತು ದ್ವಿತೀಯ ಎಂಬ ಎರಡು ತಳಿಗಳಿವೆ. ಏಕ ತಳಿಯ ಹೂವಿನಲ್ಲಿ ದೊಡ್ಡದಾದ ಒಂದು ಎಸಳು ಇದ್ದು. ಗಮನಿಸಿ ನೋಡಿದಾಗ ಬುಡದಲ್ಲಿ ಪುಟ್ಟದಾದ ಎರಡು ಎಸಳುಗಳು ಕಾಣುತ್ತವೆ. ದ್ವಿತೀಯ ತಳಿಯಲ್ಲಿ ಒಂದಕ್ಕೊಂದು ಸುರುಳಿ ಸುತ್ತಿಕೊಂಡಿರುವ ಐದು ಎಸಳುಗಳಿವೆ. ಇದರ ಎಸಳುಗಳು ಮೃದು. ಹತ್ತಿರವಿರುವ ಗಿಡಗಳಿಗೆ ಹಬ್ಬುವ ಈ ಬಳ್ಳಿ ಹೂಗಳಿಂದ ತುಂಬಿದಾಗ ಮೋಹಕವಾಗಿ ಕಾಣುತ್ತದೆ.

ಶಂಖಪುಷ್ಪಕ್ಕೆ ಆಯುರ್ವೇದದಲ್ಲಿ ವಿಶಿಷ್ಟ ಸ್ಥಾನವಿದೆ. ಸಾರಸ್ವತಾರಿಷ್ಟ ತಯಾರಿಸುವಾಗ ಇದರ ಬೇರು ಬಳಕೆ ಆಗುತ್ತದೆ. ಆತಂಕ, ಒತ್ತಡ, ನಿದ್ದೆ ಬಾರದಿರುವಿಕೆ ಮುಂತಾದ ತೊಂದರೆಗಳಿಗೆ ಔಷಧವಾಗಿ ಬಳಸುತ್ತಾರೆ. ಶಂಖಪುಷ್ಪ ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತದೆ. ಕ್ರಿಮಿದೋಷಕ್ಕೂ ಒಳ್ಳೆಯದು. ಕಫ ದೋಷ ಮತ್ತು ಸ್ತ್ರೀ ಸಂಬಂಧಿ ರೋಗಗಳಿಗೆ ಔಷಧಿಯಾಗಿ ಬಳಸುತ್ತಾರೆ. ಆದರೆ ಆಯುರ್ವೇದ ತಜ್ಞರ ಸಲಹೆಯ ಮೇರೆಗೆ ಬಳಸುವುದು ಒಳಿತು.

ಆಹಾರಕ್ಕೆ ನೈಸರ್ಗಿಕವಾಗಿ ಬಣ್ಣ ಬರಲು ಈ ಹೂವನ್ನು ಬಳಸುತ್ತಾರೆ. ತಲೆಗೆ ಹಚ್ಚುವ ತೈಲ ತಯಾರಿಕೆಯಲ್ಲಿ ನೀಲಿ ಶಂಖಪುಷ್ಪ ಹೂ ಮತ್ತು ಅದರ ಬೇರನ್ನು ಭೃಂಗರಾಜ ಸೊಪ್ಪಿನೊಂದಿಗೆ ಬಳಸುತ್ತಾರೆ. ಇದರಿಂದ ಕೂದಲು ಕಪ್ಪಾಗಿ, ಸೊಂಪಾಗಿ ಬೆಳೆಯುತ್ತದೆ.

ಈ ಸಸ್ಯದಲ್ಲಿ ನಾಲ್ಕೈದು ಬೀಜಗಳಿರುವ ಕೋಡುಗಳು ಬೆಳೆಯುತ್ತವೆ. ಬೀಜ ಬಿದ್ದಲ್ಲಿ ತನ್ನಷ್ಟಕ್ಕೆ ಗಿಡವಾಗುತ್ತದೆ. ಪ್ರತ್ಯೇಕ ಆರೈಕೆ ಬೇಕಾಗಿಲ್ಲ. ನೀರುಣಿಸಿದರೆ ಸಾಕು.